# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1164

ಸದಸ್ಯರ ಹೆಸರು : ಶ್ರೀ ಎಫ್. ಹೆಚ್. ಜಕ್ಕಪ್ಪನವರ್

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 17.12.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ ಇವರು ಜಾಹೀರಾತು ಸಂಖ್ಯೆ: 01/2019 ದಿನಾಂಕ: 10.12.2019 ಪ್ರಕಾರ ಎಷ್ಟು ಹುದ್ದೆಗಳನ್ನು ತುಂಬಲು ಜಾಹೀರಾತು ನೀಡಲಾಗಿತ್ತು. ಈ ನೇಮಕಾತಿ ಪ್ರಕ್ರಿಯೆ ಮುಗಿದು ಎಷ್ಟು ಚಾಲಕ, ಚಾಲಕ-ಕಂ-ನಿರ್ವಾಹಕರು ಸೇವೆಗೆ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ; | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2019-20ನೇ ಸಾಲಿನಲ್ಲಿ ಜಾಹೀರಾತು ಸಂಖ್ಯೆ:01/2019 ದಿನಾಂಕ: 10.12.2019ರ ಪ್ರಕಾರ ಚಾಲಕ-2500+55 (ಪರಿಶಿಷ್ಟ ಜಾತಿ ಹಿಂಬಾಕಿ), ಚಾಲಕ-ಕಂ-ನಿರ್ವಾಹಕ-259 (ಪರಿಶಿಷ್ಟ ಜಾತಿ ಹಿಂಬಾಕಿ), ಸೇರಿದಂತೆ ಒಟ್ಟು 2814 ಹುದ್ದೆಗಳನ್ನು ಭರ್ತಿಗೊಳಿಸಲು ಜಾಹೀರಾತು ನೀಡಲಾಗಿರುತ್ತದೆ.<br><br>ಸರ್ಕಾರದ ಪತ್ರ ಸಂಖ್ಯೆ: ಟಿಡಿ 116 ಟಿಸಿಎಸ್ 2022, ದಿನಾಂಕ:01.03.2024 ರಲ್ಲಿನ ಅನುಮೋದನೆಯನ್ವಯ ಚಾಲಕ-ಕಂ-ನಿರ್ವಾಹಕ-259 (ಪರಿಶಿಷ್ಟ ಜಾತಿ ಹಿಂಬಾಕಿ) ಹಾಗೂ ಚಾಲಕ-741 (686+55 (ಪರಿಶಿಷ್ಟ ಜಾತಿ ಹಿಂಬಾಕಿ), ಸೇರಿ ಒಟ್ಟು 1000 ಚಾಲಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.<br><br>ಸದರಿ 1000 ಚಾಲನಾ ಸಿಬ್ಬಂದಿಗಳ ಪೈಕಿ ಚಾಲಕ-737 (684+53 (ಪರಿಶಿಷ್ಟ ಜಾತಿ ಹಿಂಬಾಕಿ) ಹಾಗೂ ಚಾಲಕ-ಕಂ-ನಿರ್ವಾಹಕ-255 (ಪರಿಶಿಷ್ಟ ಜಾತಿ ಹಿಂಬಾಕಿ) ಸಿಬ್ಬಂದಿಗಳು ಸೇರಿದಂತೆ ಒಟ್ಟು 992 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಮುಂದುವರೆದು, ಜಾಹೀರಾತು ಸಂಖ್ಯೆ:01/2019, ದಿನಾಂಕ: 10.12.2019ರನ್ವಯ ಬಾಕಿ ಉಳಿದ ಹುದ್ದೆಗಳ ಪೈಕಿ 1000 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆಯ ಸಹಮತಿಯ ಮೇರೆಗೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕಗೊಂಡ 6 ತಿಂಗಳೊಳಗೆ ಕಡ್ಡಾಯವಾಗಿ "ನಿರ್ವಾಹಕ ಪರವಾನಿಗೆ" ಪಡೆದು ವಾಹನ ಚಾಲಕ ಕಂ ನಿರ್ವಾಹಕ ಎಂದು ಪರಿವರ್ತಿಸಿ ನಿಯೋಜಿಸುವ ಷರತ್ತಿನ ಮೇರೆಗೆ 1000 ವಾಹನ ಚಾಲಕರ ನೇರ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸಲು ಸಚಿವ ಸಂಪುಟದ ಅನುಮೋದನೆ ಪಡೆದು ಸರ್ಕಾರದ ಆದೇಶ ಸಂಖ್ಯೆ: ಟಿಡಿ 116 ಟಿಸಿಎಸ್ 2022, ದಿನಾಂಕ:01/12/2025ರಲ್ಲಿ ಅನುಮೋದನೆ ನೀಡಲಾಗಿದೆ. ಅದರಂತೆ, ಪ್ರಸ್ತುತ 1000 ಚಾಲಕ ಹುದ್ದೆಯ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಆ | ಮೇಲ್ಕಂಡ ಜಾಹೀರಾತು ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಹಿಂಬಾಕಿ ಹುದ್ದೆಗಳೆಷ್ಟು? | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಜಾಹೀರಾತು ಸಂಖ್ಯೆ:01/2019 ದಿನಾಂಕ: 10.12.2019ರ ಪ್ರಕಾರ ಚಾಲಕ-55 (ಪರಿಶಿಷ್ಟ ಜಾತಿ ಹಿಂಬಾಕಿ) ಹಾಗೂ ಚಾಲಕ-ಕಂ-ನಿರ್ವಾಹಕ-259 (ಪರಿಶಿಷ್ಟ ಜಾತಿ ಹಿಂಬಾಕಿ) ಸೇರಿದಂತೆ ಒಟ್ಟು 314 ಹುದ್ದೆಗಳಿರುತ್ತವೆ. ಇನ್ನುಳಿದಂತೆ ಪರಿಶಿಷ್ಟ ಪಂಗಡದ ಯಾವುದೇ ಹಿಂಬಾಕಿ ಹುದ್ದೆಗಳಿರುವುದಿಲ್ಲ. |

ಸಂಖ್ಯೆ: ಟಿಡಿ 259 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು